# ಅದೇ ಬಣ್ಣ



ಸಮವಸ್ತ್ರವೆಂದರೆ ನೀಲಿ ಮಾತ್ರ
ಅನ್ನಿಸುತ್ತದೆ ಯಾಕೆಂದರೆ
ಅದೇ ಬಣ್ಣ ಸಮುದ್ರಕ್ಕೆ
ಅದೇ ಬಣ್ಣ ಮುಗಿಲಿಗೆ

ಗಂಜಿ ಕುದಿಸಿ ಕೆಳಗಿಡುವ ಆಯಿಯ
ಕೈಲಿ ತುಂಡು ಬಟ್ಟೆ–ನೀಲಿ
ಅಂದಿನದು ಸವಕಳಿ
ಇಷ್ಟಿಷ್ಟೇ ಹರಿದು ಮುದುರಿ ಮತ್ತೆ
ಮುಂದಕ್ಕೆ ಜತನ
ಬಿಳಿ ಪಲಕಿ, ನೀಲಿ ಸ್ಕರ್ಟಿಗೆ
ಮೂರು ದಶಮಾನ

ಮಗಳ ಮಣಿಸರ
ಮಗನ ಮೊದಲ ಪೆನ್ನು
ಮನೆಯಲ್ಲಿ ಹಾಕಲೆಂದು ಕೊಂಡು
ಊರು ತಿರುಗಿದ ಹಿತ ಪಲಾಜೂ
ಟೀ ಸೋಸುವ ಜಾಳಿಗೆಯ ಅಂಚು
ಎಲ್ಲವೂ ನೀಲಿ ಎಂದರೆ
ಸರ್ವೇ ಸಾಮಾನ್ಯ ಅಲ್ಲ
ಈ ಸಮುದ್ರ ಅದೇ ಬಣ್ಣದ್ದು
ಈ ಮುಗಿಲೂ ಅದೇ ಬಣ್ಣದ್ದು

ಸಾಲು ಸೋಡಾ ಬಾಟ್ಲಿ
ಗಂಟಲಲ್ಲಿ ನೀಲ ಗೋಲಿ
ರಂಪಣಿ ಬಲೆಯ ಕಣ್ಣು
ಅದೇ ನೀಲ ಟೆಂಗೀಸು
ಬಂಗಡೆ ಮೀನ ಬಣ್ಣದ ಸಾರಾವಳಿ
ಗೋಧೂಳಿ ಶಾರದಕ್ಕನ ಮನೆಯ
ಹೂವು ಹೂವಿನ ಪರದೆ ನೋಡಿ–ನೀಲಿ

ಎಂದೋ ಕಳೆದು ಹೋದವ
ಮೊನ್ನೆ ಡಾಮರು ರಸ್ತೆಯಲ್ಲಿ
ಸಿಕ್ಕಿದ
ಅವನ ಸ್ಕೂಟರು... ಅದೂ ನೀಲಿ
ಹತ್ತಿ ಹೊರಟು
ನೀನಿಷ್ಟು ದಿನ ನಾನಿಷ್ಟು ದಿನ
ಕೇಳಿಕೊಂಡು ಹೇಳಿಕೊಂಡು
ಶರಟಿಗೆ ನಾನು, ಸೀರೆಗೆ ಅವನು
ಮೂಗುಜ್ಜಿಕೊಂಡು ಅಪ್ಪಿಕೊಂಡ
ಹಗುರ ಏದುಸಿರು ನೀಲಿ
ಸಂಜೆ ಬಿಟ್ಟುಹೋದ ಪೇಟೆಯಲ್ಲಿ ಇತ್ತು
ಅಳುವ ಸಣ್ಣ ನೀಲಿ

ಇಂದಿನಿಂದ ತೂಫಾನು
ಇಳಿಯಬೇಡಿ ಮೂರುದಿನ ಯಾರೂ ನೀರಿಗೆ
ಜೂಗದೇವತಾ ಧ್ವನಿವರ್ಧಕ
ಸದಾ ನೀಲಿ ಯಾಕೆ ಹೇಳಿ

ಅದೇ ಬಣ್ಣ ಸಮುದ್ರಕ್ಕೆ
ಅದೇ ಬಣ್ಣ ಮುಗಿಲಿಗೆ

● **ರೇಣುಕಾ ರಮಾನಂದ**
ಕಲೆ: ವಾಗೀಶ ಹೆಗಡೆ